ಓ ಎಸ್ **199/17**

## ಡಿ ಡಬ್ಲ್ಯೂ **-1**

**ದಿಃ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್ ಎನ್ ವಕೀಲರಿಂದಃ

ಸಾಕ್ಷಿಗೆ ನಿಡಿ2 ಮತ್ತು ನಿಪಿ 2 ನ್ನು ತೋರಿಸಲಾಗಿ ಎರಡು ದಾಖಲಾತಿಗಳು ಒಂದೇ ಎಂದರೆ ಸಾಕ್ಷಿ ನಾನು ಹಾಜರು ಮಾಡಿರುವ ದಾಖಲಾತಿ ನನಗೆ ಗೊತ್ತಿರುತ್ತದೆ ಆದರೆ ವಾದಿಗಳು ಹಾಜರು ಮಾಡಿರುವ ದಾಖಲಾತಿ ದೃಢೀಕೃತ ನಕಲಾಗಿದ್ದು ಅದನ್ನು ನಾನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಹಾಜರು ಮಾಡಿರುವ ದಾಖಲಾತಿಗಳನ್ನು ನಾನು ಓದಿರುವುದಿಲ್ಲ ಎಂದರೆ ಸಾಕ್ಷಿ ನಾನು ಓದಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ನಿಪಿ 2 ನ್ನು ಓದಿರುತ್ತೀರಾ ಇಲ್ಲವಾ ಎಂದರೆ ಸಾಕ್ಷಿ ನಾನು ಬೇರೆ ಎಲ್ಲಾ ದಾಖಲಾತಿಗಳನ್ನು ಓದಿರುತ್ತೇನೆ ಆದರೆ ನಿಪಿ 2ನ್ನು ಓದಿರುವುದಿಲ್ಲ. ನಿಪಿ2ನ್ನು ಬಿಟ್ಟು ಬೇರೆ ಎಲ್ಲಾ ದಾಖಲಾತಿಗಳನ್ನು ಓದಿರುತ್ತೀರಾ ಎಂದರೆ ಸಾಕ್ಷಿ ನಾನು ಎಲ್ಲಾ ದಾಖಲಾತಿಗಳನ್ನು ಓದಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಯಾವ ದಾಖಲಾತಿಗಳನ್ನು ಓದಿರುತ್ತೀರಾ ಯಾವ ಯಾವ ದಾಖಲಾತಿಗಳನ್ನು ಓದಿರುವುದಿಲ್ಲ ಎಂದರೆ ಸಾಕ್ಷಿ ನನಗೆ ವಯಸ್ಸಾಗಿದ್ದು ನನಗೆ ಯಾವ ಯಾವ ದಾಖಲಾತಿಗಳಲ್ಲಿ ಅಕ್ಷರಗಳು ಕಾಣಿಸುತ್ತದೋ ಅದನ್ನು ಓದಿರುತ್ತೇನೆ. ನಾನು ಹಾಜರು ಮಾಡಿರುವ ದಾಖಲಾತಿಗಳನ್ನು ಓದಿರುತ್ತೇನೆ. ನಾನು ಹಾಜರು ಮಾಡಿರುವ ದಾಖಲಾತಿಗಳು ಮತ್ತು ವಾದಿಗಳು ಹಾಜರು ಮಾಡಿರುವ ದಾಖಲಾತಿಗಳು ಓದಲು ಆಗುವಂತಹ ದಾಖಲಾತಿಗಳು ಎಂದರೆ ಸರಿಯಲ್ಲ.

ನಿಡಿ 15ನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಸದರಿ ದಾಖಲಾತಿಯನ್ನು ನೋಡಿ ಆ ದಾಖಲಾತಿಯನ್ನು ನಾನು ಹಾಜರುಪಡಿಸಿರುತ್ತೇನೋ ಇಲ್ಲವೋ ಗೊತ್ತಿಲ್ಲ ಎಂದು ಹೇಳಿ ನಂತರ ನಾನೇ ಆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಂತರ ಸಾಕ್ಷಿ ನನಗೆ ಕಣ್ಣು ಸರಿಯಾಗಿ ಕಾಣಿಸದೇ ಇರುವುದರಿಂದ ಸದರಿ ದಾಖಲಾತಿಯನ್ನು ಓದಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ನನಗೆ ಕಣ್ಣು ಕಾಣಿಸದೇ ಇರುವ ಕಾರಣ ತಕರಾರು ಅರ್ಜಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಓದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ದಾಖಲಾತಿ ಟೈಪ್ ಮಾಡಲಾಗಿರುವುದರಿಂದ ನನಗೆ ಕಾಣುತ್ತದೆ ಎಂದು ನುಡಿಯುತ್ತಾರೆ. ನಿಡಿ 15 ನಾನು ಹಾಜರುಪಡಿಸಿದ್ದು ಅದನ್ನು ನನಗೆ ಓದಲು ಆಗುವುದಿಲ್ಲ ಎಂದರೆ ಹೌದು.

ನಿಡಿ 17 ನ್ನು ನಾನೇ ಹಾಜರುಪಡಿಸಿದ್ದು ಸದರಿ ದಾಖಲಾತಿಯಂತೆ ಸರ್ಕಾರಿ ಶಾಲೆಗೆ 4 ಗುಂಟೆ ಜಮೀನನ್ನು ದಾನ ಕೊಟ್ಟಿರುವ ದಾಖಲಾತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನಿಡಿ 17 ರಲ್ಲಿ 4 ಗುಂಟೆ ಸರ್ಕಾರಿ ಶಾಲೆಗೆ ದಾನ ನೀಡಿರುವುದಾಗಿ ಹೇಳಿದ್ದು ಸದರಿ ದಾಖಲಾತಿಯಲ್ಲಿ 4 ಗುಂಟೆ ಎಂದು ಎಲ್ಲಿ ಬರೆದಿರುತ್ತದೆ ಎಂದು ಸಾಕ್ಷಿಗೆ

ದಾಖಲಾತಿಯನ್ನು ತೋರಿಸಿ ಕೇಳಿದರೆ ಸಾಕ್ಷಿ ಸದರಿ ದಾಖಲಾತಿಯಲ್ಲಿ ಉತ್ತರ ದಕ್ಷಿಣ 75 ಅಡಿಗಳು ಮತ್ತು ಪೂರ್ವ ಪಶ್ಚಿಮ 60 ಅಡಿ ಎಂದು ಬರೆದಿರುತ್ತದೆ ಎಂದು ನುಡಿಯುತ್ತಾರೆ.

ನಿಡಿ 17ರ ವಿಸ್ತೀರ್ಣದ ಚಕ್ಕುಬಂದಿಯನ್ನು ಕೂಡ ನಾನು ತಿಳಿದುಕೊಂಡಿರುತ್ತೇನೆ. ನಿಡಿ 1ರಲ್ಲಿ ಹೇಳಲಾಗಿರುವ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ನಾನು ತಿಳಿದುಕೊಂಡಿರುತ್ತೇನೆ. ನಿಡಿ 2 ರಲ್ಲಿ ಕೂಡ ಇರುವ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಕೂಡ ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನಿಡಿ 5ರಲ್ಲಿ ವಾದಿಗಳ ಸಹಿ ಇರುವುದಿಲ್ಲ ಎಂದರೆ ಸರಿ. ನಿಡಿ 5ರಲ್ಲಿ ಯಾವುದೇ ಚಕ್ಕುಬಂದಿ ತೋರಿಸಲಾಗಿರುವುದಿಲ್ಲ ಎಂದರೆ ಸರಿ. ನಿಡಿ 1, ನಿಡಿ 2 ಮತ್ತು ನಿಡಿ 17 ಆದ ದಿನಾಂಕದಂದು ಸರ್ವೆ ನಂ 61/7 ಯಾವುದೇ ಪೋಡಿಯಾಗಿರಲಿಲ್ಲ ಎಂದರೆ ಸರಿ.

ನಿಡಿ 1, ನಿಡಿ 2 ಮತ್ತು ನಿಡಿ 17 ಒಂದೇ ಸರ್ವೆ ನಂಬರಿಗೆ ಸಂಬಂದಪಟ್ಟ ದಾಖಲಾತಿ ಎಂದರೆ ಸರಿ. ನಿಡಿ 1 ಮತ್ತು ನಿಡಿ 2 ರ ನಮೂದು ಇರುವ ಇ ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇ ಸಿ ಯನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನಿಡಿ 3ರಂತೆ ಒಂದು ಇ ಸಿ ಯನ್ನು ಸರ್ವೆ ನಂ 61/7 ರಂತೆ ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದರೆ ಸಾಕ್ಷಿ ಸದರಿ ಇ ಸಿ ನನಗೆ ಸೇರಿರುವ ಸ್ವತ್ತಿಗೆ ಸಂಬಂದಪಟ್ಟಿರುವುದಿಲ್ಲ ಅದು ಸರ್ಕಾರಕ್ಕೆ ವಾದಿ ದಾನ ಮಾಡಿರುವ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಇ ಸಿ ದಿನಾಂಕಃ 01-04-1960 ರಿಂದ 31-07-1986ನೇ ಇಸವಿಯವರೆಗೆ ಇರುತ್ತದೆ ಎಂದರೆ ಸರಿ. ಸದರಿ ಇ ಸಿ ಯನ್ನು ಸರ್ವೆ ನಂ 61/7ಕ್ಕೆ ಸಂಬಂದಪಟ್ಟಂತೆ ಪಡೆದಿರುವ ಇ ಸಿ ಎಂದರೆ ಸಾಕ್ಷಿ ಸರ್ವೆ ನಂಬರ್ ಇರುತ್ತದೆ ಎಂದು ನುಡಿಯುತ್ತಾರೆ.

ಯಾವುದೇ ಇ ಸಿ ಯಲ್ಲಿ ಒಂದು ಸರ್ವೆ ನಂಬರ್ ಬಗ್ಗೆ ಕೇಳಿದರೆ ಅದರಲ್ಲಿ ಆಗಿರುವ ಎಲ್ಲಾ ಟ್ರಾನ್ಸಾಕ್ಷನ್ ಬಗ್ಗೆ ನಮೂದು ಆಗುತ್ತದೆ ಎಂದರೆ ಸಾಕ್ಷಿ ಸರಿ ಎಂದು ಹೇಳಿ ನಂತರ ನಿಡಿ 3 ರಲ್ಲಿ ನಿಡಿ 1 ಮತ್ತು ನಿಡಿ 2 ರಬಗ್ಗೆ ನಮೂದು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 1 ಸೃಷ್ಟಿತ ದಾಖಲಾತಿ ಆಗಿರುವುದರಿಂದ ಇ ಸಿ ಯಲ್ಲಿ ನಮೂದು ಇರುವುದಿಲ್ಲ ಎಂದರೆ ನಿಡಿ 1 ನಾನು ನ್ಯಾಯಾಲಯಕ್ಕೆ ನೀಡಿದ್ದು ಸದರಿ ದಾಖಲಾತಿಯ ಪ್ರತಿಯನ್ನು ವಾದಿಗಳು ಕೂಡ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತಾರೆ. ವಾದಿಗಳು ನಿಡಿ1ರ ಯಾವುದೇ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಅವರು ಹಾಜರುಮಾಡಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**